**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 101/2018**

| | | | |
|---|---|---|---|
| **ಹೆಸರು** | **:** | **ವಿಜಯಲಕ್ಷ್ಮಿ** | **ದೋ.ಸಾ. 10** |
| **ಗಂಡನ ಹೆಸರು** | **:** | **ಬಸ್ಸಯ್ಯಸ್ವಾಮಿ** | **ಪ್ರಾ.ಸಾ. 6** |
| **ವಯಸ್ಸು** | **:** | **53 ವರ್ಷ** | **ದಿನಾಂಕಃ 10-12-2021** |
| **ಉದ್ಯೋಗ** | **:** | **ಗೃಹಿಣಿ** | |
| **ವಾಸಸ್ಥಳ** | **:** | **ರಾಯಕೋಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಆರೋಪಿತರು ನನಗೆ ಗೊತ್ತು. 1 ನೇ ಆರೋಪಿ ನನ್ನ ಅಳಿಯ, 2 ನೇ ಆರೋಪಿ ನನ್ನ ಬೀಗತಿ. 3 ಮತ್ತು 4 ನೇ ಆರೋಪಿತರು ನಮ್ಮ ಸಂಬಂಧಿಕರು.

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-4 ರಿಂದ 9 ಮತ್ತು 11 ರಿಂದ 16 ನನಗೆ ಗೊತ್ತು. ಚಾಸಾ-4 ರಿಂದ 9, 11 ರಿಂದ 13 ಮತ್ತು 16 ನಮ್ಮೂರಿನವರು. ಚಾಸಾ-15 ರುದನೂರು ಗ್ರಾಮದವರು. ಚಾಸಾ-1 ನನ್ನ ಮಗಳು. ಚಾಸಾ-12 ನನ್ನ ಗಂಡ. ಚಾಸಾ-6 1 ನೇ ಆರೋಪಿಯ ಅಣ್ಣನ ಮಗ. ಚಾಸಾ-14 ನನ್ನ ಮಗ.

ನನ್ನ ಮಗಳನ್ನು 1 ನೇ ಆರೋಪಿ ಸಂಗಯ್ಯ ಸ್ವಾಮಿಗೆ ಕೊಟ್ಟು 10-07-2016 ರಂದು ನಮ್ಮ ಊರಿನಲ್ಲಿರುವ ಶಿವಲಿಂಗೇಶ್ವರ ಕಟ್ಟಿ ಮಠದಲ್ಲಿ ಮದುವೆ ಮಾಡಿರುತ್ತೇವೆ. ಮದುವೆಯ ಸಂದರ್ಭದಲ್ಲಿ ಆರೋಪಿಗೆ 2 ಲಕ್ಷ ಹಣ ಮತ್ತು 6 ತೊಲೆ ಬಂಗಾರವನ್ನು ಕೊಟ್ಟಿರುತ್ತೇವೆ.

ಮದುವೆಯಾದ ಒಂದು ತಿಂಗಳ ನಂತರ 1 ನೇ ಆರೋಪಿ ನನ್ನ ಮಗಳಿಗೆ ಮತ್ತಷ್ಟು ಹಣ ತರುವಂತೆ ಕಿರುಕುಳ ಕೊಡಲು ಪ್ರಾರಂಭಿಸಿದನು. ಸದರಿ ವಿಚಾರವನ್ನು ನಮ್ಮ ಮಗಳು ನಮಗೆ ತಿಳಿಸಿದಾಗ ನಾನು, ನನ್ನ ಗಂಡ ಮತ್ತು ಊರಿನ ಹಿರಿಯರು 4-5 ಬಾರಿ ಪಂಚಾಯತಿ ಮಾಡಿ

ಆರೋಪಿತರಿಗೆ ಬುದ್ದಿ ಹೇಳಿದ್ದೆವು. ಪಂಚಾಯತಿ ಸಂದರ್ಭದಲ್ಲಿ ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು 1 ನೇ ಆರೋಪಿ ಒಪ್ಪಿಕೊಂಡರೂ ಸಹ ಆನಂತರ ಪುನಃ ಆತ ನನ್ನ ಮಗಳಿಗೆ ಕಿರುಕುಳ ಕೊಟ್ಟಿರುತ್ತಾನೆ. ಮನೆ ಕಟ್ಟಲು ಹಣ ತೆಗೆದುಕೊಂಡು ಬಾ ಎಂದು 2017 ನೇ ಇಸವಿಯಲ್ಲಿ 1 ನೇ ಆರೋಪಿ ನನ್ನ ಮಗಳಿಗೆ ಕಿರುಕುಳ ಕೊಟ್ಟಿರುತ್ತಾನೆ. 2017 ನೇ ಇಸವಿಯಲ್ಲಿ ನನ್ನ ಮಗನ ಮದುವೆ ಇತ್ತು, ಆ ಸಂದರ್ಭದಲ್ಲಿ 1 ನೇ ಆರೋಪಿ ತನಗೆ 5 ತೊಲೆ ಬಂಗಾರ ಕೊಡಿಸುವಂತೆ ನನ್ನ ಮಗಳಿಗೆ ಕಿರುಕುಳ ಕೊಟ್ಟಿರುತ್ತಾನೆ. ನಂತರ ನಾನು ಮತ್ತು ನನ್ನ ಮಕ್ಕಳು ನಮ್ಮ ಕೈಲಾದಷ್ಟು ಬಂಗಾರ ಕೊಡಿಸುತ್ತೇವೆ ಎಂದು 1 ನೇ ಆರೋಪಿಗೆ ಸಮಾಧಾನ ಮಾಡಿದೆವು. ಮರುದಿನ ಆರೋಪಿ ತಾನು ಕೇಳಿದಷ್ಟು ಬಂಗಾರ ಕೊಡಿ ಇಲ್ಲದಿದ್ದರೆ ನಿಮ್ಮ ಮಗಳನ್ನುನಿಮ್ಮ ಮನೆಯಲ್ಲೇ ಬಿಟ್ಟು ಹೋಗುತ್ತೇನೆ ಎಂದು ಹೇಳಿರುತ್ತಾನೆ. ನಂತರ ನಾವು 1 ನೇ ಆರೋಪಿಯನ್ನು ಸಮಾಧಾನಪಡಿಸಿ ನಮ್ಮಕೈಲಾದಷ್ಟು ಬಂಗಾರ ಕೊಡುತ್ತೇವೆಂದು ಹೇಳಿ ಕಳಿಸಿದೆವು.

2017 ನೇ ಇಸವಿ ಸೆಪ್ಟೆಂಬರ್ ತಿಂಗಳಿನಲ್ಲಿ 1 ನೇ ಆರೋಪಿಯ ಅಣ್ಣನ ಮಗ ಚಾಸಾ-6 ಅಂಬರೀಶ ನಮ್ಮ ಮನೆಗೆ ಬಂದು ನಿಮ್ಮ ಮಗಳಿಗೆ ಹುಷಾರಿಲ್ಲ , ಪ್ರಜ್ಞೆ ತಪ್ಪಿದ್ದಾಳೆ , ಅದಕ್ಕೆ ಆಸ್ಪತ್ರೆಗೆಸೇರಿಸಿದ್ದಾರೆಂದು ಹೇಳಿದನು. ತಕ್ಷಣ ನಾನು ಮತ್ತು ನಮ್ಮ ಪಕ್ಕದದ ಮನೆಯವರಾದ ಚಾಸಾ-11 ಲಲಿತಾಬಾಯಿ ನನ್ನ ಮಗಳ ಗಂಡನ ಮನೆ ಇರುವ ರುದನೂರು ಗ್ರಾಮಕ್ಕೆ ಹೋದೆವು. ನನ್ನ ಮಗಳ ಮನೆಗೆ ಹೋಗಿ ನೋಡಲಾಗಿ ಸದರಿ ಮನೆಯಲ್ಲಿ ಯಾರೂ ಇರಲಿಲ್ಲ. ಆದರೆ ನನ್ನ ಮಗಳು ನಡುಮನೆಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಳು. ತಕ್ಷಣ ನಾನು ನನ್ನ ಗಂಡ ಚಾಸಾ-12 ರವರಿಗೆ ಫೋನ್ ಮಾಡಿದೆ. ನಂತರ ನನ್ನ ಗಂಡ 4-5 ಜನರೊಂದಿಗೆ ವಾಹನವೊಂದರಲ್ಲಿ ರುದನೂರು ಗ್ರಾಮಕ್ಕೆ ಬಂದು ನನ್ನ ಮಗಳನ್ನು ಸದರಿ ವಾಹನದಲ್ಲೇ ಸೇಡಂ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಸೇಡಂ ಆಸ್ಪತ್ರೆಯ ವೈದ್ಯರು ನನ್ನ ಮಗಳಿಗೆ ಏನಾಗಿದೆ ಎಂದು ಕೇಳಿದಾಗ ನಾವು ಆಕೆ ತನ್ನ ಗಂಡನ ಮನೆಯಲ್ಲಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು ಎಂದು ಹೇಳಿದೆವು. ವೈದ್ಯರು ಇದು ಕೊಲೆ ಯತ್ನ ಪ್ರಕರಣದಂತೆ ಕಾಣುತ್ತಿದ್ದು , ಎಂ.ಎಲ್.ಸಿ. ಮಾಡಿಸುವಂತೆ ಹೇಳಿದರು. ಅದರಂತೆ ಎಂ.ಎಲ್.ಸಿ. ಪ್ರಕರಣ ದಾಖಲಿಸಿ ಎರಡು ದಿನ ಸೇಡಂ ಆಸ್ಪತ್ರೆಯಲ್ಲೆ ನನ್ನ ಮಗಳಿಗೆ ಚಿಕಿತ್ಸೆ ಕೊಟ್ಟಿರುತ್ತಾರೆ.

ಆಸ್ಪತ್ರೆಗೆ ಸೇರಿಸಿದ ದಿನ ರಾತ್ರಿ ಸುಮಾರು 8 ಗಂಟೆ ವೇಳೆಗೆ ನನ್ನ ಮಗಳಿಗೆ ಪ್ರಜ್ಞೆ ಬಂತು. ಏಕೆ ಪ್ರಜ್ಞೆ ತಪ್ಪಿ ಬಿದ್ದಿದ್ದೆ ಎಂದು ನನ್ನ ಮಗಳನ್ನು ವಿಚಾರಿಸಲಾಗಿ ಆಕೆ ತನ್ನ ಗಂಡ 1 ನೇ ಆರೋಪಿ ತನ್ನ ಕೊರಳಿಗೆ ಓಡ್ನಿಯನ್ನು ಸುತ್ತಿ ಎಳೆದಿರುತ್ತಾನೆ, ಅದರಿಂದ ನಾನು ಪ್ರಜ್ಞೆ ತಪ್ಪಿ ಬಿದ್ದೆ ಎಂದು

ತಿಳಿಸಿರುತ್ತಾಳೆ.

ಆಸ್ಪತ್ರೆಯಿಂದ ನನ್ನ ಮಗಳನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ನಮ್ಮ ಊರಿಗೆ ಹೋಗುವ ದಾರಿಯಲ್ಲೇ ಸಿಗುವ ಆಕೆಯ ಗಂಡನ ಊರಾದ ರುದನೂರಿನಲ್ಲಿರುವ ಆರೋಪಿತರ ಮನೆಗೆ ಹೋದೆವು. ಆದರೆ ಸದರಿ ಮನೆಯಲ್ಲಿ ಯಾರೂ ಇರಲಿಲ್ಲ ಮತ್ತು ಬೀಗ ಹಾಕಿದ್ದರಿಂದ ನನ್ನ ಮಗಳನ್ನು ವಾಪಾಸು ನಮ್ಮ ಮನೆಗೆ ಕರೆದುಕೊಂಡು ಬಂದೆವು.

ಪೋಲೀಸರು ಈ ಪ್ರಕಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 30-04-2017 ರಂದು ನನ್ನ ಮಗನ ಮದುವೆ ನಿಶ್ಚಯವಾಗಿದ್ದರಿಂದ ನನ್ನ ಮಗಳ ಗಂಡ 1 ನೇ ಆರೋಪಿ ಮತ್ತು ಆತನ ತಾಯಿ 2 ನೇ ಆರೋಪಿ ಇಬ್ಬರೂ ಸೇರಿ ನಿನ್ನ ಅಣ್ಣನ ಮದುವೆಯಲ್ಲಿ 2 ತೊಲೆ ಬಂಗಾರ ಕೊಡಬೇಕು ಎಂದು ನನ್ನ ಮಗಳಿಗೆ ಕಿರಿಕಿರಿ ಮಾಡಿದ್ದರು ಎನ್ನುವುದು ಸರಿ. ದಿನಾಂಕ 18-04-2017 ರಂದು 1 ಮತ್ತು 2 ನೇ ಆರೋಪಿರು ಮನೆ ಕಟ್ಟಲು 2 ಲಕ್ಷ ರೂ. ನಿನ್ನ ತಂದೆಯ ಕಡೆಯಿಂದ ತೆಗೆದುಕೊಂಡು ಬಾ ಎಂದು ನನ್ನ ಮಗಳಿಗೆ ಹೊಡೆ ಬಡಿ ಮಾಡಿದ್ದರು ಎನ್ನುವುದು ಸರಿ.

ದಿನಾಂಕ 25-04-2017 ರಂದು ನನ್ನ ಗಂಡ ಚಾಸಾ-12, 8 ಮತ್ತು ನನ್ನ ಮಗ ಚಾಸಾ-14 ರವರು ರುದನೂರು ಗ್ರಾಮಕ್ಕೆ ಹೋಗಿ ಸದರಿ ಗ್ರಾಮದವರಾದ ಚಾಸಾ-15 ಮಲ್ಲಿಕಾರ್ಜುನ , ಚಾಸಾ-9 ರೇವಣಸಿದ್ದಯ್ಯ ಮತ್ತು ಭೂತಪೂರ ಗ್ರಾಮದ ಚಾಸಾ-16 ರವರನ್ನು ಕರೆಯಿಸಿ ಪಂಚಾಯತಿ ಮಾಡಿ ನನ್ನ ಮಗಳಿಗೆ ಕಿರುಕುಳ ಕೊಡಬೇಡಿ ಎಂದು 1 ಮತ್ತು 2 ನೇ ಆರೋಪಿತರಿಗೆ ಬುದ್ಧಿಮಾತು ಹೇಳಿದ್ದರು ಎನ್ನುವುದು ಸರಿ.

ದಿನಾಂಕ 10-10-2017 ರಂದು ರಾತ್ರಿ 10 ಗಂಟೆ ಸುಮಾರಿಗೆ 1 ಮತ್ತು 2 ನೇ ಆರೋಪಿತರು ಕೂಡಿಕೊಂಡು ನನ್ನ ಮಗಳಿಗೆ ಏ ರಂಡಿ ನಿನ್ನ ತವರು ಮನೆಯಿಂದ ಬಂಗಾರ ಮತ್ತು ಹಣ ತೆಗೆದುಕೊಂಡು ಬಾ ಎಂದರೂ ನೀನು ತೆಗೆದು ಕೊಂಡುಬಂದಿಲ್ಲ ಎಂದು ಆಕೆಯೊಂದಿಗೆ ಜಗಳ ಆಗಿದ್ದರು ಎನ್ನುವುದು ಸರಿ. ಸದರಿ ದಿನ 3 ಮತ್ತು 4 ನೇ ಆರೋಪಿತರೂ ಸಹ 1 ಮತ್ತು 2 ನೇ

ಆರೋಪಿತರಿಗೆ ಇವಳಿಗೆ ಇನ್ನೂ ಹೊಡೆಯಿರಿ , ನಾಳೆ ಅವಳು ತವರು ಮನೆಯಿಂದ ಹಣ ಮತ್ತು ಬಂಗಾರ ತೆಗೆದುಕೊಂಡು ಬಂದರೆ ಸರಿ , ಇಲ್ಲದಿದ್ದರೆ ಅವಳಿಗೆ ಖಲಾಸ್ ಮಾಡಿ ಎಂದು ಬೈದು ಜೀವ ಬೆದರಿಕೆ ಹಾಕಿ ಪ್ರಚೋದನೆ ನೀಡಿರುತ್ತಾರೆ ಎನ್ನುವುದು ಸರಿ.

ಸದರಿ ಎಲ್ಲಾ ವಿಚಾರಗಳನ್ನು ನನ್ನ ಮಗಳು ನನಗೆ ಫೋನ್ ಮಾಡಿ ತಿಳಿಸಿರುತ್ತಾಳೆ ಎನ್ನುವುದು ಸರಿ.

ದಿನಾಂಕ 11-10-2017 ರಂದು ಮ.12-30 ಗಂಟೆಗೆ ಚಾಸಾ6 ರವರು ನಮ್ಮ ಮನೆಗೆ ಬಂದು ನನ್ನ ಮಗಳು ತನ್ನ ಓಡ್ನಿಯಿಂದ ತಾನೇ ನೇಣು ಹಾಕಿಕೊಂಡಿರುತ್ತಾಳೆ ಅಂತಾ ಮತ್ತು ಬಾಜು ಮನೆಯ ರಹೆಮತ್, ನಾಗಮ್ಮ, ಮಹೇಬೂಬ್ ಎಂಬುವವರುಆಕೆಯನ್ನು ಬಿಡಿಸಿರುತ್ತಾರೆ ಅಂತಾ ನನಗೆ ತಿಳಿಸಿದರು ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವ-ಇಚ್ಛೆ,ಯಿಂದ ಚಾಸಾ-6 ನಮ್ಮ ಮಗಳು ಪ್ರಜ್ಞೆ ತಪ್ಪಿದ್ದಾಳೆ ಎಂದು ಮಾತ್ರ ಹೇಳಿರುತ್ತಾರೆ ಬೇರೆನೂ ಹೇಳಿರುವುದಿಲ್ಲ. ಮಗಳನ್ನು ನಾವೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎನ್ನುತ್ತಾರೆ. ನನ್ನ ಮತ್ತು ಚಾಸಾ-11 ರವರೊಂದಿಗೆ ಚಾಸಾ-14 ರವರೂ ಸಹ ಸೇಡಂ ಆಸ್ಪತ್ರೆಗೆ ಬಂದಿದ್ದರು ಎನ್ನುವುದು ಸರಿ.

ನನ್ನ ಮಗಳಿಗೆ 5 ತೊಲೆ ಬಂಗಾರ ಮತ್ತು 2 ಲಕ್ಷ ಹಣ ತೆಗೆದುಕೊಂಡು ಬಾ ಎಂದು 1 ಮತ್ತು 2ನೇ ಆರೋಪಿತರು ಕಿರುಕುಳ ಕೊಟ್ಟಿದ್ದರಿಂದ ಮತ್ತು ಸದರಿಯವರಿಗೆ 3 ಮತ್ತು 4 ನೇ ಆರೋಪಿತರು ಪ್ರಚೋದನೆ ನೀಡಿದ್ದರಿಂದ ಮತ್ತು ಸದರಿ ಕಿರುಕುಳ ಸಹಿಸದೇ ನನ್ನ ಮಗಳು ತನ್ನ ಓಡ್ನಿಯಿಂದ ಆಕೆಯ ಗಂಡನ ಮನೆಯಲ್ಲಿ ನೇಣು ಹಾಕಿಕೊಂಡಿರುತ್ತಾಳೆಂದು ನಾನು ಪೋಲೀಸರ ಮುಂದೆ ದಿನಾಂಕ 14-10-2017 ರಂದು ಕೊಟ್ಟಿದ್ದ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸಾಕ್ಷಿ ನೀವು ಹೇಳುವ ರೀತಿ ನಾನು ಯಾರ ಮುಂದೆಯೂ ಹೇಳಿಕೆ ಕೊಟ್ಟಿಲ್ಲ ಎನ್ನುತ್ತಾರೆ. ಸಾಕ್ಷಿ ಸ್ವ-ಇಚ್ಛೆಯಿಂದ 1ನೇ ಆರೋಪಿಯೇ ನನ್ನ ಮಗಳ ಕುತ್ತಿಗೆಗೆ ಓಡ್ನಿಯನ್ನು ಬಿಗಿದು ಎಳೆದಿರುತ್ತಾನೆ ಎಂದು ನಮ್ಮ ಮಗಳು ನಮ್ಮ ಮುಂದೆ ಹೇಳಿರುತ್ತಾಳೆ ಎನ್ನುತ್ತಾರೆ.

ಸಾಕ್ಷಿ ದಿನಾಂಕ 14-10-2017 ರಂದು ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯ 2ನೇ ಪುಟದ ಕೊನೆಯ ಪ್ಯಾರಾದಲ್ಲಿ "ನನ್ನ ಮಗಳು ---------- ಎಂಬಲ್ಲಿನಿಂದ --------- ನೇಣು ಹಾಕಿಕೊಂಡಿರುತ್ತಾಳೆ" ಎಂಬಲ್ಲಿಯವರೆಗಿನ ಭಾಗವನ್ನು ಈಗ ನಿಪಿ-5 ಎಂದು ಗುರುತಿಸಲಾಯಿತು.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಗೆ ರೂ.200/- ಹಣ ಖರ್ಚು ಕೊಡುವಂತೆ ಆದೇಶಿಸಿ ಪಾಟೀ ಸವಾಲನ್ನು ಮುಂದೂಡಲಾಯಿತು.**</u>

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**